# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 482 |
| ಮಾನ್ಯ ಸದಸ್ಯರ ಹೆಸರು | ಶ್ರೀ ಬಸವರಾಜ ಹೊರಟ್ಟಿ |
| ಉತ್ತರಿಸುವ ಸಚಿವರು | ಉನ್ನತ ಶಿಕ್ಷಣ ಸಚಿವರು. |
| ಉತ್ತರಿಸಬೇಕಾದ ದಿನಾಂಕ | 23-07-2019. |

<table>
<tr><th>ಕ್ರಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕನ್ನಡ ವಿಶ್ವವಿದ್ಯಾಲಯ ಹಂಪಿಯಲ್ಲಿ ಪ್ರಸ್ತುತ ಅಧೀಕ್ಷಕರಾಗಿ ಕೆಲಸ ನಿರ್ವಹಿಸುತ್ತಿರುವ ನೌಕರರು ಮೂಲವಾಗಿ ಯಾವ ಹುದ್ದೆಗೆ ನೇಮಕವಾಗಿದ್ದರು (ನೇಮಕಾತಿಯ ಬಗ್ಗೆ ಸಂಪೂರ್ಣ ಮಾಹಿತಿ ಒದಗಿಸುವುದು)</td><td>
<table>
<tr><th>ಪ್ರಸ್ತುತ ಅಧೀಕ್ಷಕರು</th><th>ಮೂಲವಾಗಿ ನೇಮಕವಾಗಿದ್ದ ಹುದ್ದೆ</th></tr>
<tr><td>1. ಶ್ರೀ ಮತಿ ಅನಿತಾ ಬೋಥೆಲ್ಲೊ.</td><td>ಕಿರಿಯ ಸಹಾಯಕರು</td></tr>
<tr><td>2. ಶ್ರೀ ರಿಚರ್ಡ್ ಡಿಸೋಜ.</td><td>ಕಿರಿಯ ಸಹಾಯಕರು.</td></tr>
<tr><td>3. ಶ್ರೀ ಜೆ.ಬಸವನಗೌಡ.</td><td>ಕಿರಿಯ ಸಹಾಯಕರು.</td></tr>
<tr><td>4. ಶ್ರೀಮತಿ ಎಂ.ಬಿ. ಆಶಾ.</td><td>ಕಿರಿಯ ಸಹಾಯಕರು</td></tr>
<tr><td>5. ಶ್ರೀ ಶಶಿಕುಮಾರ.</td><td>ಕಿರಿಯ ಸಹಾಯಕರು.</td></tr>
<tr><td>6. ಶ್ರೀಸೋಮನಾಥ.ಎಚ್.ಎಂ.</td><td>ಪ್ಯಾಕರ್.</td></tr>
<tr><td>7. ಜಿ.ಶಿವಕುಮಾರ.</td><td>ಜವಾನರು.</td></tr>
<tr><td>8. ಶ್ರೀ ಗ್ಯಾನಪ್ಪ ಬಡಿಗೇರ.</td><td>ಕಾವಲುಗಾರರು.</td></tr>
<tr><td>9. ಶ್ರೀ ಲಕ್ಷ್ಮಣ ಮಹಾಮುನಿ.</td><td>ಶೀಘ್ರಲಿಪಿಗಾರರು.</td></tr>
<tr><td>10.ಶ್ರೀಮತಿ.ಕೆ.ಎಂ.ಪಾರ್ವತಮ್ಮ</td><td>ಬೆರಳಚ್ಚುಗಾರರು.</td></tr>
</table>
</td></tr>
<tr><td>ಆ)</td><td>ಇವರು ವ್ಯಾಟ್ಸಪ್ ಹಾಗೂ ಫೇಸ್‌ಬುಕ್‌ನಲ್ಲಿ ಅವಹೇಳನಕಾರಿ ಹೇಳಿಕೆಗಳನ್ನು ಹಾಕಿದ್ದರಿಂದ ಇವರ ವಿರುದ್ಧ ಕಮಲಾಪುರ ಪೊಲೀಸ್ ಠಾಣೆಯಲ್ಲಿ ಯಾವ ದಿನಾಂಕದಂದು ದೂರು ದಾಖಲಾಗಿತ್ತು;</td><td>ಶ್ರೀ ಸೋಮನಾಥ ಎಚ್.ಎಂ. ಇವರ ವಿರುದ್ಧ ದಿನಾಂಕ: 13.05.2017 ರಂದು ದೂರು ದಾಖಲಾಗಿತ್ತು.</td></tr>
<tr><td>ಇ)</td><td>ಈ ದೂರಿನನ್ವಯ ಸದರಿಯವರು ಎಷ್ಟು ಅವಧಿಯವರೆಗೆ ನ್ಯಾಯಾಂಗ ಅಭಿರಕ್ಷೆಯಲ್ಲಿದ್ದರು;</td><td>ಮೂರು ದಿನಗಳವರೆಗೆ ನ್ಯಾಯಾಂಗ ಅಭಿರಕ್ಷೆಯಲ್ಲಿದ್ದರು.</td></tr>
<tr><td>ಈ)</td><td>ಇವರ ವಿರುದ್ಧ ನಿವೃತ್ತ ನ್ಯಾಯಾಧೀಶರಿಂದ ವಿಚಾರಣೆ ನಡೆಸಿ ವಿಶ್ವವಿದ್ಯಾಲಯಕ್ಕೆ ವಿಚಾರಣಾ ವರದಿ ಸಲ್ಲಿಸಲಾಗಿದೆಯೇ;</td><td>ಬೇರೆ 8 ಆರೋಪಗಳ ಮೇಲೆ ವಿಚಾರಣೆ ನಡೆದು ವಿಚಾರಣಾ ವರದಿ ಸಲ್ಲಿಕೆಯಾಗಿದೆ. ಕಮಲಾಪುರ ಠಾಣೆಯಲ್ಲಿ ದಾಖಲಾದ ದೂರಿನ ಪ್ರಕರಣದಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯ, ಧಾರವಾಡ ಪೀಠವು ತಡೆಯಾಜ್ಞೆ ನೀಡಿದ್ದರಿಂದ ವಿಚಾರಣೆ ನಡೆದಿಲ್ಲ.</td></tr>
</table>

2..

| | | |
|---|---|---|
| ಉ) | ಈ ವರದಿಯನ್ವಯ ಯಾವ ಕ್ರಮ ಕೈಗೊಳ್ಳಲಾಗಿದೆ; | ವಿಚಾರಣಾ ವರದಿಯಲ್ಲಿ ಸಾಬೀತಾದ ಆರೋಪಗಳನ್ನು ಸಮರ್ಥಿಸುವ ಸಾಕ್ಷ್ಯಗಳನ್ನು/ ದಾಖಲೆಗಳನ್ನು ಒದಗಿಸದೇ ಇದ್ದುದರಿಂದ ವಿಚಾರಣಾ ವರದಿಯನ್ನು ಸಕ್ಷಮ ಪ್ರಾಧಿಕಾರವು ಒಪ್ಪಿರುವುದಿಲ್ಲ. |
| ಊ) | ಸದರಿಯವರು ನೇರವಾಗಿ ಮಾಧ್ಯಮಕ್ಕೆ ಹೋಗಲು ಹಾಗೂ ಮಾಹಿತಿ ಹಕ್ಕಿನಡಿ ಮಾಹಿತಿ ಕೇಳಲು ವಿಶ್ವವಿದ್ಯಾಲಯದ ಅನುಮತಿ ಪಡೆದಿದ್ದಾರೆಯೇ; | ಮಾಧ್ಯಮಕ್ಕೆ ಹೋಗಲು ಮಾಹಿತಿ ಕೇಳಲು ವಿಶ್ವವಿದ್ಯಾಲಯದ ಪೂರ್ವಾನುಮತಿ ಪಡೆಯಬೇಕೆಂಬ ನಿರ್ಬಂಧವು ವಿಶ್ವವಿದ್ಯಾಲಯದ ಅಧಿನಿಯಮದಲ್ಲಿ ಇರುವುದಿಲ್ಲ. |
| ಋ) | ಅಮಾನತ್ತಾದ ಸದರಿ ನೌಕರರನ್ನು ಪುನಃ ಯಾವಾಗ ಸೇವೆಗೆ ಸೇರಿಸಿಕೊಂಡು ವೇತನ ನೀಡಲಾಗುತ್ತಿದೆ: | ದಿನಾಂಕ 11.6.2019 ರಿಂದ ಕರ್ತವ್ಯಕ್ಕೆ ಹಾಜರಾಗಿರುತ್ತಾರೆ. |
| ಋ | ಅಮಾನತ್ತು ಹಿಂಪಡೆಯಲು ಕಾರಣಗಳೇನು? | 2 ವರ್ಷಗಳಿಂದ ಅಮಾನತ್ತಿನಲ್ಲಿ ಇರಿಸಲಾಗಿದ್ದು, ಸಿ.ಸಿ.ಎ ನಿಯಮಾವಳಿಗಳ ಪ್ರಕಾರ ಅಮಾನತ್ತು ಹಿಂಪಡೆಯಲಾಗಿದೆ. |
| ಎ) | ಈ ಪ್ರಕರಣದ ಸಂಪೂರ್ಣ ತನಿಖೆಯನ್ನು ಯಾವುದಾದರೂ ತನಿಖಾ ಏಜೆನ್ಸಿಗೆ ವಹಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ? | ಮಾನ್ಯ ನ್ಯಾಯಾಲಯದ ತಡೆಯಾಜ್ಞೆ ಇರುವುದರಿಂದ ಮತ್ತೊಂದು ಆಯಾಮದ ತನಿಖೆಗೆ ಅವಕಾಶವಿಲ್ಲ. |

**ಸಂಖ್ಯೆ: ಇಡಿ 10 ಕೆವಿವಿ 2019**

(ಜಿ.ಟಿ.ದೇವೇಗೌಡ)

ಉನ್ನತ ಶಿಕ್ಷಣ ಸಚಿವರು